ತೆಗೆದುಕೊಟ್ಟಾಗ ಅವನ ಕೆಲಸ ಲಾಟರಿಯಾಗುತ್ತದೆ ಯಾರೆಂದರೆ ಲಂಚ ಕಲೆಕ್ಟ್ ಮಾಡುವವನದ್ದು, ಅದು ಎಕ್ಸ್‌ಪೋಸ್ ಆಗಲೆಂದು ಪ್ರಥಮವಾಗಿ ಸರ್ಕಾರ ಈ ವರ್ಷ ಈ ಆದೇಶವನ್ನು ಕೊಟ್ಟಿದ್ದೇವೆ. ಮತ್ತೆ ಮತ್ತೊಂದು ಸೂಕ್ತವಾದ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ, ಅಲ್ಲಿಯ ಭಾಗದ ಶಾಸಕರು ಹಾಗೂ ಕಾರ್ಪೊರೇಟರ್‌ಗಳನ್ನು ಕರೆದು ಈ ನ್ಯೂನತೆಗಳ ಬಗ್ಗೆ ನೀವೇತಕ್ಕೆ ಚರ್ಚೆ ಮಾಡಬಾರದು, ಅವನು ಸರಿ ಮಾಡುವುದಕ್ಕೆ ಸಮರ್ಪಕವಾದ ಸಲಹೆಗಳನ್ನು ಕೊಡುತ್ತೇವೆಂದು ಹೇಳಿದರು, ನಾನು ಆದಷ್ಟು ಬೇಗ ಆ ಸಭೆಯನ್ನು ಕರೆದು ಅವರ ಮಾರ್ಗ ದರ್ಶನವನ್ನು ಪಡೆದು ಇದನ್ನು ಆಡಳಿತದಲ್ಲಿ ಮೂರ್ಪಾಡು ಮಾಡುತ್ತೇವೆ. ಹಾಗೂ ಆಗುವಂತಹ ಅನಾಹುತವನ್ನು ತಪ್ಪಿಸುವುದಕ್ಕೆ ಸರ್ಕಾರ ಸಿದ್ದವಿದೆ.

ರೇಷ್ಮೆ ಆಮದು – ರಫ್ತಿನ ವಿವರಗಳು

470(4133) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಪ್ರಮಾಣದಲ್ಲಿ ರೇಷ್ಮೆ ಬೆಳೆ ಬೆಳೆಯಲಾಯಿತು; ವಾರ್ಷಿಕವಾರು ವಿವರ ನೀಡುವುದು;

ಆ) ಕಳೆದ ಮೂರು ವರ್ಷಗಳಲ್ಲಿ ರೇಷ್ಮೆ ಆಮದು, ರಫ್ತು ಕುರಿತು ವಿವರ ನೀಡುವುದು;

ಇ) ರೇಷ್ಮೆ ಅವಲಂಬಿತ ಕುಟುಂಬಗಳೆಷ್ಟು;

ಈ) ರೇಷ್ಮೆ ಅಭಿವೃದ್ಧಿಗೆ ಸರ್ಕಾರ ಇದುವರೆವಿಗೆ ಕೈಗೊಂಡಿರುವ ಕ್ರಮಗಳೇನು; ಮುಂದೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಉತ್ಪಾದಿಸಿದ ರೇಷ್ಮೆ ಬೆಳೆ ವಿವರಗಳು ಕೆಳಕಂಡಂತಿವೆ:–

ವರ್ಷ	ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಗೂಡು ಉತ್ಪಾದನೆ (ಮೆ.ಟನ್‌ಗಳಲ್ಲಿ)	ಕಚ್ಚಾ ರೇಷ್ಮೆ ಉತ್ಪಾದನೆ (ಮೆ.ಟನ್‌ಗಳಲ್ಲಿ)
1	2	3	4
2000–01	1,12,557	66.518	8200
2001–02	1,16,158	73,860	8728
2002–03	88.903	55,851	6760

ಆ)

ವರ್ಷ	ಆಮದು ಮೌಲ್ಯ (ರೂ.ಕೋಟಿ)	ರಫ್ತು ಮೌಲ್ಯ (ರೂ.ಕೋಟಿಗಳಲ್ಲಿ)
1	2	3
2000–01	475	2422
2001–02	624	2360
2002–03	633	2163

ಇ) 2.11 ಲಕ್ಷ ರೇಷ್ಮೆ ಬೆಳೆಗಾರರ ಕುಟುಂಬಗಳು 12.500 ರೀಲರ್ ಕುಟುಂಬಗಳು

ಈ) 1. ಹೊಸ ತಾಂತ್ರಿಕತೆಗಳ ಕುರಿತಂತೆ ರೇಷ್ಮೆ ಬೆಳೆಗಾರರಿಗೆ ಹಿಪ್ಪುನೇರಳೆ ಬೇಸಾಯ, ರೇಷ್ಮೆ ಹುಳು ಸಾಕಾಣಿಕೆ ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ತಿಳುವಳಿಕೆ / ತರಬೇತಿ ನೀಡಲಾಗುತ್ತಿದೆ.

2. ಹೊಸತಳಿ ಹಿಪ್ಪುನೇರಳೆ ಹಾಗೂ ರೇಷ್ಮೆ ಮೊಟ್ಟೆಗಳನ್ನು ಕ್ಷೇತ್ರಮಟ್ಟದಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ರೇಷ್ಮೆ ಕೃಷಿಯ ಪ್ರತಿಯೊಂದು ಹಂತದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಸಹಾಯಧನ ಹಾಗೂ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ರೇಷ್ಮೆ ಬಿತ್ತನೆ ಪ್ರದೇಶಗಳಲ್ಲಿ ಇಲಾಖಾ ವೆಚ್ಚದಲ್ಲಿ ಸಾಮೂಹಿಕ ಸೋಂಕು ನಿವಾರಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

3. ರೇಷ್ಮೆ ಗೂಡಿನ ಬೆಲೆ ಕುಸಿತದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದಿಂದ ದಿ: 16–09–02 ರಿಂದ 15–12–02ರವರೆಗೆ ರೇಷ್ಮೆ ನೂಲು ಬಿಚ್ಚಾಣಿಕೆಗೆ ವಹಿವಾಟಾದ ಪ್ರತಿ ಕೆ.ಜಿ. ಗೂಡಿಗೆ 10.00 ರೂ.ನಂತೆ ಪ್ರೋತ್ಸಾಹಧನವನ್ನು ರೇಷ್ಮೆ ಬೆಳೆಗಾರರಿಗೆ ನೀಡಲಾಗಿರುತ್ತದೆ.

4. ಮಲ್ಟಿ ಎಂಡ್ ಯಂತ್ರಗಳಲ್ಲಿ ಉತ್ಪಾದಿಸಿ ರೇಷ್ಮೆ ವಿನಿಯಮ ಕೇಂದ್ರಗಳಲ್ಲಿ ಮಾರಾಟವಾದ ಒಂದು ಕೆ.ಜಿ. ರೇಷ್ಮೆಗೆ ರೂ. 75 ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

5. ಹೊಸ ಪ್ರದೇಶದ ರೀಲರುಗಳು ಉತ್ಪಾದಿಸಿದ ಒಂದು ಕೆ.ಜಿ. ರೇಷ್ಮೆಗೆ ರೂ. 50ರ ಪ್ರೋತ್ಸಾಹಧನ ನೀಡಲಾಗುತ್ತಿದೆ. ಮಹಿಳಾ ರೀಲರುಗಳಿಗೆ ರೂ. 60 ರಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

6. ಹೊಸ ಪ್ರದೇಶದಲ್ಲಿ ಉತ್ಪಾದಿಸಿದ ಗೂಡಿಗೆ ಒಂದು ಕೆಜಿಗೆ ರೂ. 5ರ ಪ್ರೋತ್ಸಾಹಧನ ನೀಡಲಾಗುತ್ತಿದೆ.

7. ಅದಲ್ಲದೆ ಹತ್ತನೇ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ (2006–07) ಒಟ್ಟು 12,600 ಮೆಟ್ರಿಕ್ ಟನ್ ಕಚ್ಚಾ ರೇಷ್ಮೆ ಉತ್ಪಾದನಾ ಗುರಿ ಸಾಧಿಸಲು ಈ ಕೆಳಗಿನ ವಿಶೇಷ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಲಾಗಿದೆ.

ಅ) ಗುಣಮಟ್ಟದ ರೇಷ್ಮೆ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಹೊಸ ತಾಂತ್ರಿಕತೆಗಳ ಅಳವಡಿಕೆಗೆ ಪ್ರೋತ್ಸಾಹ ನೀಡುವುದು.

ಆ) ಹೊಸ ಹಿಪ್ಪುನೇರಳೆ ತಳಿಗಳು ಹಾಗೂ ಸಿ.ಎಸ್.ಆರ್. ದ್ವಿತಳಿ ಸಂಕರಣ ತಳಿಗಳ ಕ್ಷೇತ್ರಮಟ್ಟದ ಸಾಕಾಣಿಕೆಯಿಂದ ಪ್ರತಿ ಹೆಕ್ಟೇರ್ ಉತ್ಪಾದಕತೆ ಹೆಚ್ಚಿಸುವುದು.

ಇ) ಜೈಕಾ 3ನೇ ಹಂತದ ಕಾರ್ಯಕ್ರಮ ಮತ್ತು ದ್ವಿತಳಿ ಪ್ರೇರಣಾ ಕಾರ್ಯಕ್ರಮದಿಂದ ಗುಣಮಟ್ಟದ ದ್ವಿತಳಿಗೂಡಿನ ಉತ್ಪಾದನೆ ಹೆಚ್ಚಿಸುವುದು.

ಈ) ಕೇಂದ್ರ ರೇಷ್ಮೆ ಮಂಡಲಿಯ ನೆರವಿನ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ವಿವಿಧ ರೇಷ್ಮೆ ಕೃಷಿ ಚಟುವಟಿಕೆಗಳಿಗೆ ಪ್ರೋತ್ಸಾಹಧನ ನೀಡುವುದು.

ಉ) ರೇಷ್ಮೆ ಕೃಷಿ ಹಾಗೂ ನೂಲು ಬಿಚ್ಚಾಣಿಕೆಯ ಆಧುನೀಕರಣ ಮತ್ತು ಯಾಂತ್ರೀಕರಣಕ್ಕೆ ಪ್ರೋತ್ಸಾಹ ನೀಡುವುದು.

ಊ) ದೊಡ್ಡ ಪ್ರಮಾಣದ ರೇಷ್ಮೆ ಉತ್ಪಾದನೆಗೆ ಪೂರಕವಾಗಿ ರೇಷ್ಮೆ ಕಾಯಿದೆಗೆ ಸೂಕ್ತ ಸೇರ್ಪಡೆ ತರಲು ಉದ್ದೇಶಿಸಲಾಗಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಇಲ್ಲಿ ಕ್ಲಿಷ್ಟಕರವಾದ ವಿಷಯಗಳಿವೆ, ಇವತ್ತು ರೇಷ್ಮೆ ಬೆಳೆಗಾರರ ಜೀವನ ಅರಣ್ಯ ರೋದನವಾಗಿದೆ, ಅವರ ಬದುಕು ನಿಜಕ್ಕೂ ಕೂಡ ನೇಣು

ಹಾಕಿಕೊಂಡು ವಿಷಪ್ರಾಶನ ಮಾಡಿ ಸಾಯಬೇಕೆನ್ನುವ ರೀತಿಯಲ್ಲಿದೆ. ಈಗ ರೇಷ್ಮೆಯನ್ನು ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದೀರಿ. ಇಲ್ಲಿ ಕರ್ನಾಟಕದಲ್ಲಿ ಏತಕ್ಕೆ ನೀವು ಉತ್ತೇಜನವನ್ನು ಕೊಡುತ್ತಿಲ್ಲ, ಕರ್ನಾಟಕದಲ್ಲಿರುವ ರೇಷ್ಮೆ ಬೆಳೆಗಾರರಿಗೆ ಹೆಚ್ಚಿನ ಉತ್ತೇಜನವನ್ನು ಕೊಟ್ಟರೆ ಅವರ ಬದುಕು ನಿಜವಾಗಿಯೂ ಸ್ವಚ್ಛಂದವಾಗುತ್ತದೆ. ಮೈಸೂರು ಶ್ರೀಗಂಧ, ರೇಷ್ಮೆ, ಮಲ್ಲಿಗೆ ಇವೆಲ್ಲವನ್ನೂ ಹೊಂದಿರುವ ವೈವಿಧ್ಯಮಯ ರಾಜ್ಯ: ಈ ರಾಜ್ಯದಲ್ಲಿ ಇವತ್ತು ರೇಷ್ಮೆ ಬೆಳೆಗಾರರ ಜೀವನ ಚಿಂತಾಜನಕವಾಗಿದೆ. ಎಷ್ಟೋ ಜನರು ತಮ್ಮ ವೃತ್ತಿಯನ್ನು ಬಿಟ್ಟು ಪ್ರಾಣಹತ್ಯೆ ಮಾಡಿಕೊಂಡಿದ್ದಾರೆ, ಆದರೆ ಕೊಟ್ಟಿರುವ ಅಂಕಿ ಅಂಶಗಳು ಒಂದೂ ಕೂಡ ಸರಿಯಾಗಿಲ್ಲವೆಂದು ನಾನು ಸ್ಪಷ್ಟವಾಗಿ ನಿಖರವಾಗಿ ಹೇಳುತ್ತೇನೆ. ಇದರಲ್ಲಿ ಏನೋ ನಿಗೂಢತೆ ಅಡಗಿದೆ, ಕೊಟ್ಟಿರುವ ಮಾಹಿತಿ ಸರಿಯಾದ ಮಾಹಿತಿಯಿಲ್ಲ, ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಲಿ.

12.40 ಪಿಎಂ

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಶಂಕರಲಿಂಗೇಗೌಡರು ಮೈಸೂರಿನಿಂದ ಬಂದವರು ಮತ್ತು ಸಾಂಪ್ರದಾಯಿಕ ರೇಷ್ಮೆ ಬೆಳೆಗಾರರ ಜಿಲ್ಲೆಯವರು. ಅವರು ತಮ್ಮ ಕನ್ನಡದ ಪಾಂಡಿತ್ಯವನ್ನು ಬಹಳ ಚೆನ್ನಾಗಿ ಪ್ರದರ್ಶನ ಮಾಡುತ್ತಾರೆ. ಆದರೆ ಕೊಟ್ಟಿರುವ ಮಾಹಿತಿಯೇ ಸರಿಯಿಲ್ಲ ಎನ್ನುವುದಾದರೆ, ಅವರ ಹತ್ತಿರ ಏನಾದರೂ ಮಾಹಿತಿ ಇದ್ದರೆ ಕೊಡಲಿ ಎಂದು ನಾನು ಬಯಸುತ್ತಿದ್ದೇನೆ. ಏಕೆಂದರೆ, ನಾವು ಕೊಟ್ಟಿರತಕ್ಕಂಥ ಮಾಹಿತಿ ಸರಿಯಾಗಿದೆ ಎನ್ನವುದು ನಮ್ಮ ಅನಿಸಿಕೆ. ರಾಜ್ಯದಲ್ಲಿ ಎಷ್ಟು ಜನ ರೇಷ್ಮೆ ಬೆಳೆಗಾರರಿದ್ದಾರೆ, ಎಷ್ಟು ಜನ ರೀಲರ್ಸ್ ಇದ್ದಾರೆ ಇತ್ಯಾದಿಯಾಗಿ ಇಡೀ ರಾಜ್ಯಕ್ಕೆ ಅನ್ವಯವಾಗುವ ಪ್ರಶ್ನೆಗಳನ್ನು ಹಾಕಿದ್ದಾರೆ. ಆ ಎಲ್ಲಾ ಪ್ರಶ್ನೆಗಳಿಗೂ ನಾವು ಉತ್ತರವನ್ನು ಒದಗಿಸಿದ್ದೇವೆ. ಉಪ ಪ್ರಶ್ನೆ ಕೇಳುವಾಗ ಅವರು ರೇಷ್ಮೆ ಬೆಳೆಗಾರರು ಸತ್ತಿದ್ದಾರೆ ಎಂದು ಹೇಳಿದರು. ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ನಮ್ಮ ಚಿಂತನೆಯೂ ಕೂಡ ರೇಷ್ಮೆ ಬೆಳೆಗಾರರನ್ನು ಸಂಕಷ್ಟದಿಂದ ಪಾರು ಮಾಡಬೇಕು ಎಂದಾಗಿರುವುದರಿಂದ, ಪ್ರಥಮ ಬಾರಿಗೆ ರೇಷ್ಮೆ ಗೂಡಿಗೆ ಪ್ರೋತ್ಸಾಹ ಧನವನ್ನು ಕೊಟ್ಟಂಥ ಸರ್ಕಾರವೆಂದರೆ ನಮ್ಮ ಎಸ್.ಎಂ. ಕೃಷ್ಣಾರವರ ಸರ್ಕಾರ ಎಂದು ನಾನು ಅವರಿಗೆ ತಿಳಿಸಲು ಇಚ್ಛೆಪಡುತ್ತೇನೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಅಂದರೆ ಕೇಂದ್ರದ 6 ಕೋಟಿ ರೂ. ಮತ್ತು ರಾಜ್ಯದ 6 ಕೋಟಿ ರೂ. ಹೀಗೆ ಒಟ್ಟು 12 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ನಾವು ವಿನಿಯೋಗ ಮಾಡಿದ್ದೇವೆ. 7–8 ವರ್ಷಗಳ ಹಿಂದೆ ಇದ್ದಂಥ ರಫ್ತಿನ ಪ್ರಮಾಣವನ್ನು ನೋಡಿದಾಗ ಇಂದು ರಫ್ತಿನ ಪ್ರಮಾಣ ಹೆಚ್ಚಾಗಿರತಕ್ಕಂಥಾದ್ದು ವಾಸ್ತವಾಂಶ. ರೇಷ್ಮೆ ಬೆಳೆಗಾರರು ಉದ್ಯಮವನ್ನು ಬಿಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಮಳೆಯ ಅಭಾವದಿಂದ ಮತ್ತು ಚೇಂಜ್ ಆಫ್ ಕ್ರಾಪ್‌ನಿಂದ ಸ್ವಲ್ಪಮಟ್ಟಿಗೆ ಕಡಿಮೆಯಾಗಿರುವುದು ನಿಜ. ಅಂದರೆ ಒಂದು ಸಾರಿ ಹಿಪ್ಪುನೇರಳೆಯನ್ನು ತೆಗೆದುಹಾಕಿ ಮತ್ತೆ ಅದನ್ನು ಮಾಡಬೇಕಾದರೆ ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಆ ದೃಷ್ಟಿಯಿಂದ ಸ್ವಲ್ಪ ಕಡಿಮೆಯಾಗಿದೆ. ಕಳೆದ ಸಾಲಿನಲ್ಲಿ 70 ರೂಪಾಯಿ ಇದ್ದಂಥ ಗೂಡಿನ ಬೆಲೆ ಇವತ್ತು ಸರಾಸರಿ 130 ರೂಪಾಯಿಗಳಾಗಿರತಕ್ಕಂಥಾದ್ದು ರೈತರಲ್ಲಿ ಒಂದು ಆಶಾಭಾವನೆಯನ್ನು ಉಂಟು ಮಾಡಿದ್ದು, ರೈತರು ಮತ್ತೆ ಈ ಉದ್ಯಮಕ್ಕೆ ಬರುತ್ತಿದ್ದಾರೆಂದು ಹೇಳಲು ಇಷ್ಟಪಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಶಂಕರಲಿಂಗೇಗೌಡರು ಹೇಳಿರುವುದು ನೂರಕ್ಕೆ ನೂರರಷ್ಟು ಸತ್ಯ. ಏಕೆಂದರೆ, ನಮ್ಮ ಕಡೂರು ತಾಲ್ಲೂಕಿನಲ್ಲಿ ಕೂಡ ಒಂದು

ರೀಲಿಂಗ್ ಕಾಂಪ್ಲೆಕ್ಸ್ ಮಾಡಿ ಸರ್ಕಾರ ಅಲ್ಲಿ ರೈತರನ್ನು ಉದ್ಧಾರ ಮಾಡಲಿಲ್ಲ, ರೈತರನ್ನು ಹಾಳು ಮಾಡಿತು. ಇವತ್ತು ಏನು ಪರಿಸ್ಥಿತಿಯಾಗಿದೆ ಎಂದರೆ, ನಮ್ಮ ದೇಶಕ್ಕೆ ಚೀನಾ ದೇಶದ ರೇಷ್ಮೆ ಬಂದ ಮೇಲೆ ನಮ್ಮ ರೈತರು ಬೆಳೆಯುತ್ತಿದ್ದಂಥಾದ್ದಕ್ಕೆ ಮಾರುಕಟ್ಟೆಯಲ್ಲಿ ಬೆಲೆ ಇಲ್ಲದ ಹಾಗಾಯಿತು. ನಮ್ಮಲ್ಲಿ ಒಬ್ಬೊಬ್ಬ ರೈತರಿಗೆ 75 ಸಾವಿರ ರೂಪಾಯಿಗಳನ್ನು ಸಾಲ ಕೊಟ್ಟು, ರೀಲಿಂಗ್ ಕಾಂಪ್ಲೆಕ್ಸ್‌ನಲ್ಲಿ ಒಂದು ಛೇಂಬರ್ ಕೊಟ್ಟು, , ವೀವಿಂಗ್ ಮೆಷಿನ್ ಕೊಟ್ಟಿದ್ದರು. ಇವತ್ತು ಆ ಮೆಷಿನ್‌ಗಳೆಲ್ಲಾ ತುಕ್ಕು ಹಿಡಿದಿವೆ. ಅದರ ಬಗ್ಗೆ ಯಾವ ಅಧಿಕಾರಿಗಳೂ ತಲೆ ಕೆಡಿಸಿಕೊಂಡಿಲ್ಲ. ಈ 75 ಸಾವಿರ ರೂಪಾಯಿಗಳ ಸಾಲ ಇವತ್ತು 3,60,000 ರೂಪಾಯಿಗಳಾಗಿದೆ. ಅದರ ವಸೂಲಿಗಾಗಿ ಇವತ್ತು ಇಲಾಖೆಯ ಅಧಿಕಾರಿಗಳು ಏನು ಮಾಡಿದ್ದಾರೆಂದರೆ, ರೆವಿನ್ಯೂ ಇಲಾಖೆಯ ಅಧಿಕಾರಿಗಳ ಮುಖಾಂತರ ಅವರ ಮನೆ ಜಪ್ತಿ ಮಾಡಿಸುವಂಥಾದ್ದು ಮತ್ತು ಅವರ ಜಮೀನನ್ನು ಬದಲಾವಣೆ ಮಾಡಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿರುವುದು ನಿಲ್ಲಬೇಕು. ಅವರ ಈ ಸಾಲವನ್ನು ಮನ್ನಾ ಮಾಡಬೇಕು. ಏಕೆಂದರೆ, ಅವರು ಅಲ್ಲಿ ಮೂರು ತಿಂಗಳೂ ಕೂಡ ರೀಲಿಂಗ್ ಮಾಡಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ಕೈಗೊಳ್ಳಬೇಕು ಎಂದು ನಾನು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಡಾ॥ ಭಾರತಿಶಂಕರ್ : ಮಾನ್ಯ ಅಧ್ಯಕ್ಷರೇ, ಟಿ. ನರಸೀಪುರದಲ್ಲಿ ಒಂದು ರೇಷ್ಮೆ ಫಿಲೇಚರ್ ಯೂನಿಟ್ ಇದೆ. 7 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೊರಿಯಾ ಮತ್ತು ಜಪಾನ್‌ನಿಂದ ಯಂತ್ರೋಪಕರಣಗಳನ್ನು ಖರೀದಿ ಮಾಡಿ, ಆಧುನೀಕರಣ ಮಾಡಿ, ಉತ್ತಮ ಗುಣಮಟ್ಟದ ನೂಲನ್ನು ಮಾಡಲು ವ್ಯವಸ್ಥೆ ಮಾಡಲಾಯಿತು. ಈಗ ಅಲ್ಲಿನ ಸುಮಾರು 250 ಕಾರ್ಮಿಕರು ಬೀದಿ ಪಾಲಾಗುವಂಥ ಪರಿಸ್ಥಿತಿ ಇದೆ. ಏಕೆಂದರೆ, ಈಗ ಮಾರುಕಟ್ಟೆಯಲ್ಲಿ ಗೂಡು 65–70 ರೂಪಾಯಿಗಳಿಗೆ ಲಭ್ಯವಿದ್ದರೂ ಕೂಡ, ನಿಗಮದ ಅಧ್ಯಕ್ಷರು ಖಾಸಗಿಯವರಿಂದ ನೂಲನ್ನು ಖರೀದಿ ಮಾಡುವಂಥ ವ್ಯವಹಾರ ಅಲ್ಲಿ ನಡೆಯುತ್ತಿದೆ. ದಯಮಾಡಿ ಮಾನ್ಯ ರೇಷ್ಮೆ ಸಚಿವರು ಈ ಬಗ್ಗೆ ಮುತುವರ್ಜಿ ವಹಿಸಿ, ಬೀದಿ ಪಾಲಾಗುವಂಥ ಕಾರ್ಮಿಕರನ್ನು ಸರಿ ದಾರಿಗೆ ತರಲು ಅನುಕೂಲವಾಗುವಂತೆ, ಈ ಫಿಲೇಚರ್‌ಗಳಲ್ಲಿ ಖರೀದಿಯನ್ನು ಶುರು ಮಾಡಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಎಂ. ರೇವಣ್ಣ : ಸನ್ಮಾನ್ಯ ಸಭಾಧ್ಯಕ್ಷರೇ, ಸಾಂಪ್ರದಾಯಿಕ ಜಿಲ್ಲೆಗಳನ್ನು ಹೊರತುಪಡಿಸಿ ಬೈವೋಲ್ಟೀನನ್ನು ರಾಜ್ಯಾದ್ಯಂತ ವಿಸ್ತರಿಸಬೇಕು ಎನ್ನುವ ಚಿಂತನೆ ಮೇರೆಗೆ ನಾವು ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ. 2005ನೇ ಇಸವಿಗೆ ನಾವು ಪ್ರಾಪಂಚಿಕ ಮಾರುಕಟ್ಟೆಗೆ ಹೋಗುವಂಥ ಸಮಯ ಬಂದಿರುವ ಈ ಸಂದರ್ಭದಲ್ಲಿ ನಮ್ಮ ಇಲಾಖೆ ಸದೃಢವಾಗಬೇಕು, ಸ್ಪರ್ಧಾತ್ಮಕವಾದ ಬೆಲೆಯಲ್ಲಿ ಕೊಡಬೇಕು ಎನ್ನುವ ದೃಷ್ಟಿಯಿಂದ ವಿಸ್ತಾರಗೊಳಿಸತಕ್ಕಂಥಾದ್ದು ಸರ್ಕಾರದ ಉದ್ದೇಶ. ಈ ವಿಚಾರದಲ್ಲಿ ನಾವು ಬೆಳಗಾಂ ಮತ್ತು ಬಿಜಾಪುರಗಳಲ್ಲಿ ಸಕ್ಸಸ್ ಆಗಿದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ, ಅಲ್ಲಿಯ ವಾತಾವರಣ, ಭೌಗೋಳಿಕ ಪರಿಸರ ಮತ್ತು ಶಾಖಾಂಶಗಳಿಂದಾಗಿ ಅಷ್ಟು ಯಶಸ್ವಿ ಆಗಲಿಲ್ಲ. ಆದರೂ ಕೂಡ ಇದರಡಿಯಲ್ಲಿ ಬರುವಂಥ ಅನೇಕ ಚಟುವಟಿಕೆಗಳಲ್ಲಿ ಅವರು ಸಾಲ ತೆಗೆದುಕೊಂಡು ಯೂನಿಟ್ಟುಗಳನ್ನು ಹಾಕಿದ್ದು, ಈ ಸಾಲವನ್ನು ಮನ್ನಾ ಮಾಡಿ ಎಂದು ಕೇಳಿದರೆ ಸರ್ಕಾರಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂದು ಮಾನ್ಯ ಕೃಷ್ಣಮೂರ್ತಿಯವರಿಗೆ ತಿಳಿಸುತ್ತೇನೆ. ರೇಷ್ಮೆ ಗೂಡಿನ ಬೆಲೆ 65–70 ರೂಪಾಯಿ ಎಂದು ಹೇಳುತ್ತಿದ್ದಾರೆ. ಆದರೆ ಇವತ್ತು ಗೂಡಿನ ಬೆಲೆ ಸರಾಸರಿ 130 ರೂಪಾಯಿಗಳು ಮತ್ತು ದಾರದ ಬೆಲೆ

1100–1200 ರೂಪಾಯಿಗಳಾಗಿದ್ದು, ಈ ಸಂದರ್ಭದಲ್ಲಿ ಇಲಾಖೆ, ರೈತರು, ರೀಲರ್ಸ್ ಮತ್ತು ಈ ಉದ್ಯಮದಲ್ಲಿರತಕ್ಕಂಥ ಎಲ್ಲಾ ವರ್ಗದವರೂ ಸಹ ಉತ್ತಮ ಸ್ಥಿತಿಯಲ್ಲಿ ಇರುವಂಥ ವಾತಾವರಣ ನಿರ್ಮಾಣವಾಗಿದೆ ಎಂದು ನಾನು ಅವರಿಗೆ ತಿಳಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಶಂಕರಲಿಂಗೇಗೌಡರು; ಇದು ಕೊನೆಯ ಉಪ ಪ್ರಶ್ನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ ನೀಡಬೇಕು ಮತ್ತು ಅವರ ಸಾಲವೂ ಮನ್ನಾ ಆಗಬೇಕು. ಯಾರೋ ಒಬ್ಬಳಿಗೆ ಓಲೆ ಹಾಕಿಕೊಳ್ಳಬೇಕು ಎಂದು ಆಸೆಯಾಯಿತಂತೆ. ಸಾಲ ಮಾಡಿ ಓಲೆ ಹಾಕಿಕೊಂಡಳಂತೆ. ಓಲೆಯ ಸಾಲಕ್ಕೆ ಬಡ್ಡಿ ಕಟ್ಟಲು ಓಲೆಯನ್ನೇ ಮಾರಿದಳು. ಹೀಗಾಗಿ ಓಲೆಯೂ ಹೋಯಿತು, ಸಾಲವೂ ಉಳಿದುಕೊಂಡಿತು. ಇವತ್ತು ನಮ್ಮ ರೈತರ ಪರಿಸ್ಥಿತಿಯೂ ಹಾಗೇ ಆಗುತ್ತಿದೆ. ದಯಮಾಡಿ ಅವರಿಗೆ ಪ್ರೋತ್ಸಾಹ ಧನ ನೀಡಿ. ಕರ್ನಾಟಕದಲ್ಲಿ ರೇಷ್ಮೆ ಬೆಳೆ ತನ್ನದೇ ಆಗಿರತಕ್ಕಂಥ ಪ್ರಾಂಜಲ್ಯ ಮಾನ್ಯತೆಯನ್ನು ಪಡೆಯಬೇಕು ಎನ್ನುವುದು ನನ್ನ ಆಸೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅಧ್ಯಕ್ಷರೇ, ಸಾಲ ಮನ್ನಾ ಮಾಡದಿದ್ದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಒಂದು ಲಕ್ಷ ರೂ. ಆದರೂ ಕೊಡಿ.

ಅಧ್ಯಕ್ಷರು : ಸಾಲ ಮನ್ನಾ ಮಾಡಲು ಆಗುವುದಿಲ್ಲ ಎಂದು ಹೇಳಿದ್ದಾರಲ್ಲಾ, ಇನ್ನೂ ಏಕೆ ಕೇಳುತ್ತಿದ್ದೀರಿ? ಈ ಪ್ರಶ್ನೆ ಮುಗಿಯಿತು, ಈಗ ಮುಂದಿನ ಪ್ರಶ್ನೆ, ಲಕ್ಷ್ಮೀನಾರಾಯಣರವರೇ ನೀವು ಪ್ರಶ್ನೆ ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಒಂದು ಲಕ್ಷ ರೂ. ಅಷ್ಟನ್ನೇ ಕೊಡಿ, ಇನ್ನೂ ಎರಡೂವರೆ ಲಕ್ಷ ರೂಪಾಯಿಗಳ ಸಾಲ ಹಾಗೇ ಉಳಿಯುತ್ತದೆ.

ಡಾ॥ ಭಾರತಿಶಂಕರ : ನಾನು ಆಗಲೇ ಕೇಳಿದ ಪ್ರಶ್ನೆಗೆ ಉತ್ತರ ಹೇಳಲು ಮಂತ್ರಿಗಳು ರೆಡಿ ಇದ್ದರು, ಅಷ್ಟರಲ್ಲೇ ನೀವು ಬೇರೆ ಪ್ರಶ್ನೆಗೆ ಅವಕಾಶ ಕೊಟ್ಟಿದ್ದೀರಿ. ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಹೇಳಲು ತಯಾರಿದ್ದಾರೆ, ಉತ್ತರ ಹೇಳಲು ಅವಕಾಶ ಕೊಡಿ.

ಅಧ್ಯಕ್ಷರು : ಈಗಾಗಲೇ ಪ್ರಶ್ನೋತ್ತರ ವೇಳೆಯ ಒಂದು ಗಂಟೆಯ ಅವಧಿ ಮುಗಿದು ಇಪ್ಪತ್ತು ನಿಮಿಷ ಜಾಸ್ತಿಯಾಗಿದೆ. ಅದಕ್ಕೆ ಒಂದು ಲೆಕ್ಕಾಚಾರ ಬೇಡವೇ? ಈಗ ಮುಂದಿನ ಪ್ರಶ್ನೆ, ಲಕ್ಷ್ಮೀನಾರಾಯಣರವರೇ ನೀವು ಪ್ರಶ್ನೆ ಕೇಳಿ.

ತುರುವೇಕೆರೆ ತಾಲ್ಲೂಕಿನಲ್ಲಿ ಮುರಾರ್ಜಿ ವಸತಿ ಶಾಲೆ

471(4142) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ತುರುವೇಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷದಿಂದ ಮೊರಾರ್ಜಿ ವಸತಿ ಶಾಲೆಗಳನ್ನು ಯಾವ್ಯಾವ ತಾಲ್ಲೂಕುಗಳಿಗೆ ನೀಡಲಾಗಿದೆ;

ಆ) ಅನೇಕ ಬಾರಿ ಪ್ರಸ್ತಾವನೆ ನೀಡಲಾಗಿದ್ದರೂ, ಸಹ ತುರುವೇಕೆರೆ ತಾಲ್ಲೂಕಿಗೆ ಮಂಜೂರು ಮಾಡದಿರಲು ಕಾರಣವೇನು;

ಇ) ಈ ವರ್ಷದಲ್ಲಿ ಮುರಾರ್ಜಿ ವಸತಿನಿಲಯವನ್ನು ತುರುವೇಕೆರೆ ತಾಲ್ಲೂಕಿಗೆ ಮಂಜೂರು ಮಾಡಲಾಗುವುದೇ;

ಈ) ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು?